O.S.187/2016 P.W.1

ದಿನಾಂಕ 10/12/2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಮಾನ್ಯ ಶ್ರೀ ಪಿ ವಿ ಎ ವಕೀಲರಿಂದಃ**

ನಾನು ದಾವಾ ಸತ್ತುಗಳಲ್ಲಿ ಜಂಟಿ ಸ್ವಾಧೀನದಲ್ಲಿ ಇರುವ ಹಾಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ನಮ್ಮ ಒಟ್ಟು ಕುಟುಂಬದ ಉಸ್ತುವಾರಿ ಎಲ್ಲವನ್ನು ನಾರಾಯಣಪ್ಪ ಮತ್ತು ಪಾಪಣ್ಣರವರೇ ನೋಡಿಕೊಳ್ಳುತ್ತಿದ್ದರು. ಪಾಪಣ್ಣನಿಗೆ ಇತರೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ಪಾಪಣ್ಣ ಹೆಸರಿನಲ್ಲಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ಹೇಳುತ್ತಾರೆ ಅವು ಕೂಡ ಒಟ್ಟು ಕುಟುಂಬದ ಆಸ್ತಿ ಎಂದು ಹೇಳುತ್ತಾರೆ. ಪಾಪಣ್ಣ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪಾಪಣ್ಣನಿಗೂ ಹೆಂಡ್ತಿ ಮಕ್ಕಳಿರುತ್ತಾರೆ ಎಂದರೆ ಸರಿ.

ಪಾಪಣ್ಣನ ಮಕ್ಕಳು ಮತ್ತು ನಾನು ಎಲ್ಲರೂ ಒಂದೇ ಮನೆಯಲ್ಲಿ ವಾಸವಿರುತ್ತೇವೆ. ನನ್ನ ತಮ್ಮ ಆವುಲಪ್ಪನಿಗೆ ಸರ್ವೇ ನಂ 187 ಮಂಜೂರಾಗಿತ್ತು ಎಂದರೆ ಸರಿ. ಬಾಗೇಪಲ್ಲಿ ಟ್ರಿಬುನಲ್ ನಲ್ಲಿ 1 ನೇ ಪ್ರತಿವಾದಿಗೂ ಜಮೀನು ಮಂಜುರಾಗಿರುತ್ತದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ 1 ನೇ ಪ್ರತಿವಾದಿಗೆ ಆಗಿರುವುದಿಲ್ಲ ನನ್ನ ತಂದೆಗೆ ಆಗಿರುತ್ತದೆ. ಸದರಿ ಮಂಜುರಾತಿ 1 ನೇ ಪ್ರತಿವಾದಿಗೆ ಆಗಿದ್ದು ನನಗೂ ಅದಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು.)**

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಬಾಗೇಪಲ್ಲಿ